# ಭಾರತೀಯ ಬಾಲ್ಯಾವಸ್ಥೆ ಎಂಬುದೊಂದಿದೆಯೆ?

ಕಳೆದೆರಡು ದಶಕಗಳಿಂದ, ಭಾರತೀಯ ಮಕ್ಕಳು ಈ ಹಿಂದೆಂದೂ ಇಲ್ಲದಷ್ಟು ಮಟ್ಟಿಗೆ ಸಾರ್ವಜನಿಕ ನೀತಿಯ ಗಮನಸೆಳೆಯುವ ವಸ್ತುವಿಷಯವಾಗಿದ್ದಾರೆ. ತ್ವರಿತವಾಗಿ ವರ್ಧಿಸುತ್ತಿರುವ ಅಸಂಖ್ಯಾತ ಸರ್ಕಾರಿ ಹಾಗೂ ಸರ್ಕಾರೇತರ ಕಾರ್ಯಕ್ರಮಗಳು ಮತ್ತು ಚಟುವಟಿಕೆಗಳ ಹಿಂದೆಯೇ, 'ಬಾಲ ಕಾರ್ಮಿಕರು', ರಸ್ತೆಬದಿಯ ಮಕ್ಕಳು', ಮತ್ತು 'ಮಕ್ಕಳ ವೇಶ್ಯಾವೃತ್ತಿ' ಮುಂತಾದ ವಿವಿಧ ವರ್ಗೀಕೃತ ಸಮಸ್ಯೆಗಳಿಗಾಗಿ ಅಸಂಖ್ಯಾತ ಪ್ರಕಾಶನ ಸಂಸ್ಥೆಗಳು ತಮ್ಮ ಸಂಪೂರ್ಣ ಸಮಯವನ್ನು ಮೀಸಲಿಟ್ಟಿವೆ, ಮತ್ತು ವಾಸ್ತವಿಕವಾಗಿ ಬದುಕನ್ನು ಸಾಗಿಸುತ್ತಿರುವ ಮಕ್ಕಳನ್ನು ಅದರಿಂದ ಹೊರಗಿಡುವುದು ಅಸಾಧ್ಯವಾಗಿದೆ. ಈ ಪ್ರಕಟಣೆಗಳು ಸರಕಾರದ ಅಸಮರ್ಥತೆಯನ್ನು, ಪೋಷಕರ ಅಜ್ಞಾನವನ್ನು, ಜನರ ಜಡ್ಡುಗಟ್ಟಿದ ವರ್ತನೆಗಳನ್ನು, ಮತ್ತು ಶೈಕ್ಷಣಿಕ ಅವಕಾಶಗಳ ಕೊರತೆಗಳನ್ನು ಪರೋಕ್ಷವಾಗಿ ತಿಳಿಸುತ್ತವೆ, ಮತ್ತು ಅವುಗಳು ಭಾರತೀಯ ಸಮಾಜವನ್ನು ಪರಿಪೂರ್ಣವಾಗಿ ಅಭಿವೃದ್ಧಿಪಡಿಸಿದ ಬಾಲ್ಯಾವಸ್ಥೆಯ ಪರಿಕಲ್ಪನೆಯ ಕೊರತೆ ಇರುವಂತೆ ರಚಿಸುತ್ತವೆ. ಇದರಿಂದಾಗಿ, ಪ್ರಪಂಚದಲ್ಲಿನ ಅತೀ ದೊಡ್ಡ ಸಂಖ್ಯೆಯಲ್ಲಿರುವ ಮಕ್ಕಳ ಸಮುದಾಯಕ್ಕೆ ಹೊರಗಿನ ಸಂಶೋಧನೆ, ಸಮರ್ಥನೆ ಮತ್ತು ಮಧ್ಯವರ್ತಿಕೆಗಳ ತುರ್ತು ಅವಶ್ಯಕತೆಯಿದೆ ಎಂಬ ಚಿತ್ರಣವು ಕಾಣಿಸುತ್ತದೆ. ಇದಕ್ಕೆ ಒಂದು ಉದಾಹರಣೆಯೆಂದರೆ, ಒಂದು ಡಚ್ ಸಂಸ್ಥೆಯು ನೆದರ್ಲ್ಯಾಂಡ್‌ನ ಸರಕಾರಕ್ಕೆ ಬರೆದ ಪತ್ರದಲ್ಲಿ, ಅಲ್ಲಿಗೆ ಭೇಟಿ ನೀಡುತ್ತಿರುವ ಭಾರತದ ವಾಣಿಜ್ಯ ಮಂತ್ರಿಗಳಿಗೆ ಭಾರತದ ಬಾಲಕಾರ್ಮಿಕರ ಭವಿಷ್ಯವನ್ನು ಗಂಭೀರವಾಗಿ ತೆಗೆದುಕೊಳ್ಳುವಂತೆ ಬುದ್ಧಿಹೇಳಬೇಕೆಂದು ಒತ್ತಾಯಿಸಿದೆಯಲ್ಲದೆ,ಭಾರತ ಸರಕಾರವು ಈ ವಿಷಯದ ಬಗ್ಗೆ ಅಲಕ್ಷ್ಯ ತೋರಿಸುತ್ತಿದೆ ಅಥವಾ ಅಸಮರ್ಥವಾಗಿದೆ. ಮತ್ತು ಸರಿಯಾದ ಸಂಖ್ಯೆಯನ್ನು ಮುಚ್ಚಿಡುತ್ತಿದೆ ಎಂಬುದಾಗಿಯೂ, ಮಕ್ಕಳ ಬಾಲ್ಯಾವಸ್ಥೆಯನ್ನು ಅರ್ಥಮಾಡಿಕೊಳ್ಳಲು ಇಡೀ ಭಾರತದ ಸಮಾಜಕ್ಕೆ ಪಾಶ್ಚಾತ್ಯ ಮಾರ್ಗದರ್ಶನದ ಅವಶ್ಯಕತೆಯಿದೆ ಎಂತಲೂ ತಿಳಿಸುತ್ತದೆ.[1]

ಭಾರತೀಯ ಮಕ್ಕಳನ್ನು 'ಸಮಸ್ಯೆಗಳಾಗಿಸಿರುವ' ಶೈಕ್ಷಣಿಕ ರಚನೆಯು ಬಾಲ್ಯಾವಸ್ಥೆಯ ಬಗೆಗಿನ ಅರಿವಿನ ಕೊರತೆಯಿಂದ ರೂಪುಗೊಂಡಿದ್ದು, ಪರಸ್ಪರ ಸಂಬಂಧಿಸಿದ ಎರಡು ವಿದ್ಯಮಾನಗಳಿಂದ ಪ್ರಭಾವಿತವಾಗಿದೆ: ವಸಾಹತುಶಾಹಿ ಪರಂಪರೆ ಮತ್ತು ಜಾಗತಿಕ ಶೈಕಣಿಕ ಸಂಶೋಧನೆಗಳಲ್ಲಿ ಸಾಮಾನ್ಯವಾಗಿ ಕಂಡುಬರುವ ಯೂರೋ-ಅಮೇರಿಕನ್ ಪ್ರಾಬಲ್ಯ. 1947ರಲ್ಲಿ ಅಧಿಕೃತವಾಗಿ ಕೊನೆಗೊಂಡ ಬ್ರಿಟಿಷ್ ವಸಾಹತುಶಾಹಿ ಆಡಳಿತವು ವಿಜ್ಞಾನ ಮತ್ತು ತಂತ್ರಜ್ಞಾನಗಳಲ್ಲಿ ಸ್ವಯಂ-ಪ್ರತಿಸ್ಥಾಪನೆಮಾಡಿಕೊಂಡ ಒಂದು ಸಾಂಸ್ಕೃತಿಕ ಮೇಲ್ಮೆಯಲ್ಲಿ ಮಾತ್ರವಲ್ಲದೆ ಮಕ್ಕಳನ್ನೂ ಒಳಗೊಂಡಂತೆ ಮನುಷ್ಯರ ಸಹಜ ಹಕ್ಕುಗಳ ಅನ್ವೇಷಣೆ ಮಾಡುವುದರಲ್ಲಿನ ಪ್ರಗತಿಯಲ್ಲಿ ತನ್ನ ಉಪಸ್ಥಿತಿಯನ್ನು ಸಮರ್ಥಿಸಿಕೊಳ್ಳಲು ಪ್ರಯತ್ನಿಸಿತು. ಭಾರತೀಯ ಸಮಾಜವು ಈ ಅನ್ವೇಷಣೆಗಳಲ್ಲಿ ಹಿಂದುಳಿದಿರುವುದಕ್ಕೆ ಭ್ರೂಣಹತ್ಯೆ, ಬಾಲ್ಯ ವಿವಾಹ ಇತ್ಯಾದಿ ಆಚರಣೆಗಳು ಸಾಕ್ಷಿಗಳಾದವು ಮತ್ತು ಸತಿಸಹಗಮನದಂತಹ ವಿಷಯದ ಜೊತೆಗೆ ಅವುಗಳು ಯಥೇಚ್ಛವಾಗಿ ಬಳಸಲ್ಪಟ್ಟವು. ಇದರ ಜೊತೆಗೆ ಭಾರತದ ಆಡಳಿತವನ್ನು ಸ್ಥಳೀಯ ಜನರಿಂದ ವಶಪಡಿಸಿಕೊಳ್ಳುವ ನಿಟ್ಟಿನ 'ಬಿಳಿ ಮನುಷ್ಯನ ಹೊರೆ'ಯ ಐಡಿಯಾಲಜಿಗೆ ಒತ್ತಾಸೆ ನೀಡಲು ಬಳಸಲ್ಪಟ್ಟವು. ಬಾಲ್ಯದ ಬಗ್ಗೆ ಭಾರತೀಯ ಕಲ್ಪನೆಗಳನ್ನು ಅಸಂಬದ್ಧ ಅಥವಾ ವಿಚಿತ್ರವಾದುದೆಂದು ಹಾಗೂ ಈ ನಾಗರೀಕತೆಯು ತನ್ನ ಉದ್ದೇಶವನ್ನು ಕಾರ್ಯಗತಗೊಳಿಸಿಕೊಳ್ಳುವವರೆಗೆ ಅದನ್ನು ಸಹಿಸಿಕೊಳ್ಳಬಹುದೆಂದು ತಿರಸ್ಕರಿಸಲಾಯಿತು. ವ್ಯಾಪ್ತಿಯು ಕಡಿಮೆಯಿದ್ದರೂ, ಮಕ್ಕಳನ್ನು ಕುರಿತ ವಸಾಹತುಶಾಹಿ ಸಂಶೋಧನೆಯು ಮಕ್ಕಳ 'ಅಸಮರ್ಪಕ ಪಾಲನೆ' ಎಂಬ ವಿಷಯದಿಂದ ಪ್ರಾರಂಭಗೊಂಡು,ಬಡಮಕ್ಕಳ ಜೀವನದಲ್ಲಿ ಮಧ್ಯಪ್ರವೇಶಮಾಡುವವರೆಗೂ ತನ್ನ ಮಾತಿನ ವರಸೆಯನ್ನು ಸಂವೃದ್ಧಗೊಳಿಸಿತು. ವಸಾಹತುಶಾಹಿ ಆಡಳಿತವು, ತಮ್ಮ ಸಮಾಜದ ವಸಾಹತುಶಾಹಿ ಪ್ರತಿನಿಧಿಸುವಿಕೆಯನ್ನು ಪ್ರಶ್ನಿಸುವ ಭಾರತೀಯ ರಾಷ್ಟ್ರೀಯವಾದಿ ವಿದ್ವಾಂಸರ ಬಗ್ಗೆ ಸ್ವಲ್ಪ ತಾಳ್ಮೆ ಕಳೆದುಕೊಳ್ಳುತ್ತಿದ್ದಂತೆ, ಅಧಿಕೃತ ಚರ್ಚೆಯು ಯುಕ್ತಿಪೂರ್ಣವಾಗಿ ಪಾಶ್ಚಾತ್ಯೀಕರಣವನ್ನು ವಿರೋಧಿಸುವ ಪುನರುಜ್ಜೀವನವಾದಿಗಳ ಅಭಿಪ್ರಾಯವನ್ನು ಬೆಂಬಲಿಸಿತು.[2] ಗೌರವಾನ್ವಿತ ಉದಾರವಾದಿ ತತ್ತ್ವಜ್ಞಾನಿ ಮತ್ತು ಉಪಯುಕ್ತವಾದಿ ಜೇಮ್ಸ್ ಮಿಲ್ಸ (1773-1836), ವಸಾಹತುಶಾಹಿಯನ್ನು ಈ ರೀತಿಯಲ್ಲಿ ಸಮರ್ಥಿಸಿದರು: ಒಬ್ಬ ಒಳ್ಳೆಯ ತಂದೆಯು ಸಣ್ಣ ವಯಸ್ಸಿನ ಅಪ್ರಬುದ್ಧ ಮಗುವಿಗೆ

ಮಾರ್ಗದರ್ಶನ ನೀಡುವಂತೆ, ಬ್ರಿಟನ್, ಪುರಾತನ ಭಾರತೀಯ ಸಮಾಜವನ್ನು ಪ್ರೌಢಾವಸ್ಥೆಗೆ ತರುತ್ತದೆ (ನೋಡಿ: ನಂದಿ, 1987: 58). ನಿರ್ಮೂಲನೆ ಮತ್ತು ಸುಧಾರಣೆಗಳಲ್ಲದೆ ಭಾರತದಲ್ಲಿ ಮಕ್ಕಳ ಪಾಲನೆಯ ಕುರಿತು ಅಧ್ಯಯನಮಾಡಲು ಏನಾದರೂ ಇದೆ ಎಂದು ವಸಾಹತುಶಾಹಿಗಳು ಹೇಗೆ ತಾನೇ ಯೋಚಿಸಲು ಸಾಧ್ಯ? ಖೇದಕರ ಸಂಗತಿ ಎಂದರೆ ಈ ನಿಲುವು, ಮರೆಯಾಗಲೇ ಇಲ್ಲ. ಭಾರತೀಯ ಮಕ್ಕಳ ಬಾಲ್ಯಾವಸ್ಥೆಯ ಅಧ್ಯಯನಗಳ ಮೇಲೆಇಂದಿಗೂ ಇದು ಪ್ರಭಾವ ಬೀರುತ್ತಲೇ ಇದೆ.

1970ರ ತೈಲ ಬಿಕ್ಕಟ್ಟು ಮತ್ತು ನಂತರ ಹಿಂಬಾಲಿಸಿದ 1980ರ ಸಾಲದ ಬಿಕ್ಕಟ್ಟುಗಳು ಸ್ವತಂತ್ರ ಭಾರತದ ಸರಕಾರವು ಮಕ್ಕಳ ಬಾಲ್ಯ ಮತ್ತು ಮಕ್ಕಳ ಕಲ್ಯಾಣಗಳ ಕುರಿತಾದ ಚರ್ಚೆಗಳ ಬಗ್ಗೆ ತೆಗೆದುಕೊಂಡ ಕ್ರಮಗಳನ್ನು ಹತಾಶೆಗೊಳಿಸಿದವು. ಅಧ್ಯಯನಗಳು ಪಾಶ್ಚಿಮಾತ್ಯ ದೇಶಗಳಲ್ಲಿನ ಕಟ್ಟುನಿಟ್ಟಾದ ಅಧ್ಯಯನ ಶಿಸ್ತಿನ ಪರಿಧಿಯನ್ನು ಅಳವಡಿಸಿಕೊಳ್ಳುವ ಒಲವು ತೋರಿದರೂ, ಬಾಲ್ಯದ ಬಗೆಗಿನ ಪಾಶ್ಚಿಮಾತ್ಯ ಪರಿಕಲ್ಪನೆಗಳನ್ನು ಅಳವಡಿಸಿಕೊಳ್ಳುವುದನ್ನು ಪ್ರಶ್ನಿಸುವ ಚರ್ಚೆಗಳು ಕೂಡ ನಡೆದವು. ಈ ಬಿಕ್ಕಟ್ಟಿನ ಜೊತೆಗೆ, ಯುನಿಸೆಫ್, ಅಂತಾರಾಷ್ಟ್ರೀಯ ಕಾರ್ಮಿಕ ಸಂಸ್ಥೆ ಮತ್ತು ವಿಶ್ವ ಬ್ಯಾಂಕ್‌ನಂತಹ ಅಂತಾರಾಷ್ಟ್ರೀಯ ಸಂಸ್ಥೆಗಳು, ಮತ್ತು ಇನ್ನಷ್ಟುಹೆಚ್ಚಿನ ಸಂಖ್ಯೆಯ ಸರಕಾರ ಮತ್ತು ಪಾಶ್ಚಿಮಾತ್ಯ ಸರಕಾರೇತರ ದಾನಿಗಳು ಮಕ್ಕಳನ್ನು ಕುರಿತ ಸಂಶೋಧನೆಗೆ ಹಣವನ್ನು ಒದಗಿಸತೊಡಗಿ,. ಸಂಶೋಧಕರು, ಬಹಳಷ್ಟು ಬಾರಿ ಅತ್ಯಂತ ವಿವರವಾಗಿಯೆ ತಿಳಿಯಪಡಿಸಿದಂತಹ, ತಾವು ನಿಗದಿಪಡಿಸಿದ ಆದ್ಯತೆಗಳಿಗನುಸಾರವಾಗಿಯೆ ಅಧ್ಯಯನಮಾಡಬೇಕೆಂಬ ಕಟ್ಟುನಿಟ್ಟಿನ ನಿಬಂಧನೆಗಳನ್ನು ವಿಧಿಸಿದರು. ಭಾರತೀಯ ಅಧ್ಯಯನಕಾರರ ಪಾತ್ರವು ಪರಿಮಾಣಾತ್ಮಕ ಜ್ಞಾನದಲ್ಲಿನ ಈಗಾಗಲೆ ಗುರುತಿಸಲಾಗಿದ್ದ ಕೊರತೆಯನ್ನು ತುಂಬುವ ನಿಟ್ಟಿನಲ್ಲಿದ್ದಿತೇ ಹೊರತು, ಭಾರತದಲ್ಲಿ ಮಕ್ಕಳ ಬಾಲ್ಯಾವಸ್ಥೆಯ ಸಮಸ್ಯೆಗಳಲ್ಲಿ ಅಂತರ್ಗತವಾಗಿರುವ ಊಹೆಗಳನ್ನು ಪ್ರಶ್ನಿಸುವುದಾಗಿರಲಿಲ್ಲ ಮತ್ತು ಈಗಲೂ ಆಗಿಲ್ಲ. ಹಿಂದಿರುಗಿ ನೋಡಿದಾಗ ಸರಕಾರವನ್ನು ಬದಿಗಿಟ್ಟು ಭಾರತೀಯ ಬಾಲ್ಯಾವಸ್ಥೆಯನ್ನು ನಿರ್ವಹಿಸುವ ಕಾಳಜಿಯಿಂದ ಹುಟ್ಟಿಕೊಂಡ ಆದ್ಯತೆಗಳು ಪರಿಣಾಮಕಾರಿಯಾಗಿರಲಿಲ್ಲ.

'ಬಾಲಕಾರ್ಮಿಕರು' ಮತ್ತು 'ರಸ್ತೆಬದಿಯ ಮಕ್ಕಳು' ಮುಂತಾಗಿ ಭಾರತೀಯ ಮಕ್ಕಳ ಬಾಲ್ಯಾವಸ್ಥೆಯ ಬಗ್ಗೆ ಧನ ಸಹಾಯ ಪಡೆಯಲು ಯೋಗ್ಯವೆನಿಸುವ ನಿಟ್ಟಿನ ಸರಣಿ 'ಸಮಸ್ಯೆ'ಗಳ ಸೃಜನೆಯು, ಭಾರತವು ಬಾಲ್ಯಾವಸ್ಥೆಯ ಬಗ್ಗೆ ಸರಿಯಾದ ಪರಿಕಲ್ಪನೆ ಇಲ್ಲದ ದೇಶವೆಂಬ ವಸಾಹತುಶಾಹಿಗಳ ಕಲ್ಪನೆಯನ್ನು ತೊಡೆದುಹಾಕಲು ಯಾವ ಕೊಡುಗೆಯನ್ನೂ ಸಲ್ಲಿಸಲಿಲ್ಲ. ಚರ್ಚಾಂಶಗಳು ಭಾರತೀಯ ಮಕ್ಕಳ ಜೀವನ ಪ್ರಪಂಚವನ್ನು ಒಂದು ದ್ವಿಮಾನ ಸರಣಿಯಾಗಿ ವಿಭಜಿಸುತ್ತವೆ. ಅದು ಹೀಗಿದೆ:ಅಹಿತಕರವಾಗಿದ್ದು, ಗಮನಿಸಿ, ಸರಿಪಡಿಸುವಂಥದ್ದು, ಮತ್ತು ಅಹಿತಕರವಲ್ಲದ್ದು ಮತ್ತು ಆ ಕಾರಣದಿಂದಾಗಿ ನಿರ್ಲಕ್ಷಿಸಬಹುದಾಗಿರುವಂಥದ್ದು. ಮಿತಿಮೀರಿದ ಋಣಾತ್ಮಕ ಭಾವನೆಗಳ ಸೂಚನೆಗಳ ಹೊರತಾಗಿ, ವಿಷಯ-ಕೇಂದ್ರಿತ ಸಂಶೋಧನೆಯು ಬಹುಸಂಖ್ಯಾತ ಜನರ ದೈನಂದಿನ ಜೀವನವನ್ನು ಅಡಗಿಸಿಬಿಡುತ್ತದೆ ಮತ್ತು ಬದಿಗೆ ಸರಿಸುತ್ತದೆ. ಪರಿಣಾಮವಾಗಿ, ಭಾರತೀಯ ಮಕ್ಕಳಿಗೆ  ಬಾಲ್ಯಾವಸ್ಥೆ ಎಂಬುದೇ ಇಲ್ಲ ಅಥವಾ ತುರ್ತು ಮಧ್ಯಪ್ರವೇಶವನ್ನು ಬೇಡುವ ತೀರಾ ಅಪಾಯದ ಸ್ಥಿತಿಯಲ್ಲಿದೆ ಎಂಬ ನಂಬಿಕೆಗೆ ಇನ್ನೂ ಜೋತುಬಿದ್ದಿವೆ. ಈಗ ಸರಕಾರೇತರ ಸಂಸ್ಥೆಗಳಲ್ಲಿ ಹೆಚ್ಚಾಗಿ ಕಂಡುಬರುತ್ತಿರುವ ಮಧ್ಯಪ್ರವೇಶಿಸುವಿಕೆಯ ಪ್ರವೃತ್ತಿಯ ಹಿನ್ನೆಲೆಯಲ್ಲಿ, ಮಕ್ಕಳನ್ನು, ಪ್ರಸ್ತಾವಿತ ಪರಿಹಾರಗಳಲ್ಲಿ ಭಾಗವಹಿಸುವ ಹಕ್ಕಿರುವಅರ್ಥಪೂರ್ಣ ಭಾಗೀದಾರರೆಂದು ಪರಿಗಣಿಸಿದರೂ ಕೂಡ, ಕಾರ್ಯಸೂಚಿಗಳು ಸೀಮಿತ ಆಯ್ಕೆಗಳ ವ್ಯಾಪ್ತಿಯ ಒಳಗೇ ನಿರ್ಧರಿಸಲ್ಪಡುತ್ತವೆ.ಜಾಗತಿಕ ಗುಣಮಟ್ಟ ಎಂದು ಪಶ್ಚಿಮವು ನಿಗದಿಪಡಿಸಿದ ಬಾಲ್ಯಾವಸ್ಥೆಯ ವಿಧಗಳ ಅನುಕರಣೆಯ ನಿಟ್ಟಿನಲ್ಲಿ, ಅಭಿವೃದ್ಧಿಯ ನಿಯೋಗಿಗಳು  (developmental agencies) ನಿರ್ಧರಿಸಿದ ಸಂಭಾವ್ಯ ಉನ್ನತ ಗುರಿಯನ್ನು ಸಾಧಿಸುವ ಹಾದಿಯಲ್ಲಿ ಭಾರತೀಯ ಸಮಾಜವು ಮುಂದುವರೆಯಲು ಸಹಾಯ ಮಾಡುವುದಕ್ಕಾಗಿ ಈ ಆಯ್ಕೆಗಳನ್ನು ವಿನ್ಯಾಸ ಮಾಡಲಾಗಿದೆ. ಬೃಹತ್ ಜಾಗತಿಕ ಜನಸಮೂಹವು ಈ ಮಾನದಂಡವನ್ನು ಪ್ರಶ್ನಿಸಬೇಕು ಎಂಬ ಹಕ್ಕುಕೋರಿಕೆಯ ಪ್ರತಿಪಾನೆಯನ್ನು 'ಸಾಂಸ್ಕೃತಿಕ ಸಾಪೇಕ್ಷವಾದ' (cultural relativism') ಎನ್ನುವ ಕಾರಣಕ್ಕೆ ತಿರಸ್ಕರಿಸಲಾಯಿತು. ಅರ್ಥಾತ್, ಮಕ್ಕಳ ಸಹಜವಾದ, ಸಾರ್ವತ್ರಿಕ ಹಕ್ಕುಗಳನ್ನು ಪ್ರಶ್ನಿಸುವ ಪ್ರಯತ್ನಗಳು ಎನ್ನುವಂತೆ ಇದು ಪರಿಗಣಿಸಲ್ಪಟ್ಟಿತು.

ಬಾಲ್ಯಾವಸ್ಥೆಯ ಅಧ್ಯಯನಗಳ ಬಗ್ಗೆ ಭಾರತದಲ್ಲಿನ ಸವಾಲೆಂದರೆ, ತಮ್ಮದೇ ಸಮಾಜದ ಕೈಯಲ್ಲಿ ನರಳುತ್ತಿರುವ ಮಕ್ಕಳನ್ನು ರಕ್ಷಿಸುವ ಹಣೆಪಟ್ಟಿಯನ್ನು ಹೊತ್ತ ಬಂಡೆಯಂತಹ ದೃಷ್ಟಿಕೋನವನ್ನು ಎದುರಿಸಿ, ತನ್ನ ನೆಲೆಯನ್ನು ಕಂಡುಕೊಳ್ಳಬೇಕಾದ ಪರಿಸ್ಥಿತಿಯು ಪರ್ಯಾಯ ದೃಷ್ಟಿಕೋನಕ್ಕೆ ಅವಕಾಶವನ್ನೆ ಕೊಡುವುದಿಲ್ಲ. ಆಶಿಶ್ ನಂದಿ ಮತ್ತು ಸುಧೀರ್ ಕಕ್ಕರ್ ಎಂಬ ಇಬ್ಬರು ಅಂತಾರಾಷ್ಟ್ರೀಯ ಖ್ಯಾತಿಯ ಲೇಖಕರು ಪರ್ಯಾಯ ದೃಷ್ಟಿಕೋನವನ್ನು ಕಂಡುಕೊಳ್ಳುವ ಆರಂಭದ ಹೆಜ್ಜೆಯನ್ನಿಡುತ್ತಿದ್ದಾರೆ.ಒಂದು ಅಭೂತಪೂರ್ವ ಅಧ್ಯಯನದಲ್ಲಿ, ಕಕ್ಕರ್ (1978) ಅವರು ಪಾಶ್ಚಿಮಾತ್ಯ ರೀತಿಯಲ್ಲಿ ತರಬೇತಿ ಹೊಂದಿದ ಒಬ್ಬ ಮನೋವಿಶ್ಲೇಷಕನಾಗಿ, ಸಾಮಾಜಿಕ ಪಾತ್ರಗಳ ಸಂಕೀರ್ಣ ವ್ಯವಸ್ಥೆ, ಸಾಂಪ್ರದಾಯಿಕ ಮೌಲ್ಯಗಳು, ರೀತಿ ರಿವಾಜುಗಳು ಮತ್ತು ರಕ್ತಸಂಬಂಧದ ನಿಯಮಗಳು ಮುಂತಾದವುಗಳ ಪರಸ್ಪರ ಬೆಸೆದುಕೊಂಡಿರುವ ಭಾರತೀಯ ಮಾನಸಿಕ ಬೆಳವಣಿಗೆಗಳನ್ನು ಪರೀಕ್ಷಿಸುವ ಮೂಲಕ ಭಾರತೀಯ ಬಾಲ್ಯಾವಸ್ಥೆಯನ್ನು ಅಧ್ಯಯನ ಮಾಡಿದರು. ಹಾಗೆ ಮಾಡುವಾಗ, ಅವರು ಮೇಲ್ವರ್ಗದ ಹಿಂದೂ ಮಕ್ಕಳ ಶೈಶವಾವಸ್ಥೆ ಮತ್ತು ಬಾಲ್ಯಾವಧಿಗಳನ್ನು ಗಮನಿಸಿ, ಇವುಗಳು ಹೇಗೆ ರೂಪುಗೊಂಡವು ಮತ್ತು ನಿರ್ದಿಷ್ಟ ಸಾಂಸ್ಕೃತಿಕ ಚೌಕಟ್ಟಿನಲ್ಲಿ ಅರ್ಥಪೂರ್ಣತೆಯನ್ನು ಹೇಗೆ ಪಡೆದುಕೊಂಡವು ಎಂಬುದನ್ನು ಅಭಿವ್ಯಕ್ತಿಸಿದರು. ಕಕ್ಕರ್ ಅವರು, ತಮ್ಮದೂ ಆಗಿರುವ, ಭಾರತೀಯ ಮನಸ್ಥಿತಿಯನ್ನು ಪಾಶ್ಚಿಮಾತ್ಯ ಮನೋವಿಶ್ಲೇಷಣಾತ್ಮಕ ನೆಲೆಯಿಂದ ನೋಡಿದರೆ , ಆಶಿಶ್ ನಂದಿಯವರದು ಬಹಿರ್ಮುಖಿ (outward) ದೃಷ್ಟಿಕೋನ. ಕಕ್ಕರ್ ,ಅವರಂತೆ, ಮಾನಸಿಕ ಸ್ವಾಸ್ಥ್ಯದ ಪಾಶ್ಚಿಮಾತ್ಯ ಪರಿಕಲ್ಪನೆಗಳಿಗೆ ಸರಿಹೊಂದದಿದ್ದರೂ ಭಾರತೀಯರು ಮಾನಸಿಕವಾಗಿ ಸ್ವಾಸ್ಥ್ಯವುಳ್ಳವರೆಂದು ಪರಿಗಣಿಸಬೇಕೆಂದು ಪಾಶ್ಚಿಮಾತ್ಯ ವೀಕ್ಷಕರಿಗೆ ತೋರಿಸುವ ಬದಲಾಗಿ ಅವರು ಪಾಶ್ಚಿಮಾತ್ಯ ಚಿಂತನೆಯು ಪರಿಕಲ್ಪನೆಗಳು ಭಾರತೀಯ 'ಸ್ವಂತಿಕೆ'ಯನ್ನು "ನಿಕಟ ಶತ್ರು" (intimate enemy) ಎಂದು ರೂಪಿಸಲು ಏಕೆ ಸಫಲವಾದವು ಎಂದು ಪ್ರಶ್ನಿಸಿದರು. ತಮ್ಮ ಮೊದಲಿನ ಪ್ರಬಂಧಗಳಲ್ಲೊಂದರಲ್ಲಿ (ನಂದಿ, 1987), ಅವರು ಮಗುವಿನ ಚಿತ್ರದೊಂದಿಗೆ ವಸಾಹತೀಕರಣಕ್ಕೊಳಗಾದವರ ವಸಾಹತುಶಾಹಿ ಸಮ್ಮಿಶ್ರಣದ ಬಗ್ಗೆ ವಾಗ್ವಾದಕ್ಕಿಳಿದರು. ಅಭಿವೃದ್ಧಿಯ ಹೆಸರಿನಲ್ಲಿ ಮಾನವೀಯತೆಯ ಮೇಲೆ ನಡೆದ ಸಾಂಸ್ಥಿಕ ದೌರ್ಜನ್ಯವನ್ನು ತೋರಿಸಲು ಬಾಲ್ಯಾವಸ್ಥೆಯನ್ನುಒಂದು ರೂಪಕವಾಗಿ ವಿರಚಿಸುವ ಪ್ರಸ್ತಾವನೆಯನ್ನು ಮುಂದಿಟ್ಟರು:

> ತನ್ನ ವೈಯಕ್ತಿಕ ಬದುಕಿನ 'ಬಾಲಿಶ' ಗತವನ್ನು ನಿರಾಕರಿಸಲು ಮಾಡುವ ಹೋರಾಟವೂ ಕೂಡ ಇತಿಹಾಸ-ಪೂರ್ವ, ಅಥವಾ ಅನಾಗರಿಕ ಮತ್ತು ಸಂಪ್ರದಾಯಗಳ ಮೊತ್ತವೆಂಬಂತೆ ತನ್ನ ಸಾಮೂಹಿಕ ಗತವನ್ನು ನಿರಾಕರಿಸುವ ಒಂದು ಪ್ರಯತ್ನವೇ ಆಗಿದೆ. ತನ್ನದೇ ಬಾಲ್ಯವನ್ನು ತನ್ನದನ್ನಾಗಿ ಮಾಡಿಕೊಳ್ಳುವ ಹೋರಾಟವು ವಿಘಟನೆಗೊಂಡ ಮಾನವ ಸಂಬಂಧಗಳು ಮತ್ತು ಅನುಭವಗಳನ್ನು ಮರಳಿ ಒಂದುಗೂಡಿಸುವ ಪ್ರಯತ್ನವೇ ಹೌದು (ನಂದಿ, 1987: 74).

ವಸಾಹತುಶಾಹಿಗೆ ಎದುರಾಗುವ ಪ್ರಕ್ರಿಯೆಯಲ್ಲಿ ವಿಘಟಿತವಾದ ಮಾನವ ಸಂಬಂಧಗಳನ್ನು ಮರಳಿ ಒಟ್ಟುಗೂಡಿಸುವಲ್ಲಿ ತನ್ನದೇ ಆದ ಸ್ಥಾನವನ್ನು ಕಂಡುಕೊಳ್ಳಬಯಸುವ ಭಾರತೀಯ ಬುದ್ಧಿಜೀವಿಗಳು ಆಶಿಶ್ ನಂದಿಯವರ ಶ್ರೋತೃಗಳು. ವ್ಯಭಿಚಾರ, ರಸ್ತೆಯ ಕಿಸೆಗಳ್ಳತನಗಳಲ್ಲಿ ನಿರತವಾಗಿರುವ, ಅವಿದ್ಯಾವಂತ ಕುಶಲಕರ್ಮಿಯೆನಿಸಿದ ಭಾರತೀಯ ಮಗುವು, ಇನ್ನೂ ಸಂಕ್ಷಿಪ್ತವಾಗಿ ಹೇಳುವುದಾದರೆ, ನಂದಿಯವರು ಹೇಳುವ 'ಪೂರ್ಣಸಮಾಜೀಕರಣಗೊಳ್ಳದ' ಮಗುವು, ಸರ್ಕಾರೇತರ ಸಂಸ್ಥೆಗಳ ಆತ್ಮೋದ್ಧಾರದ ವಸ್ತುವಾಗಿದ್ದು, ಭಾರಿ ಪ್ರಚಾರವನ್ನು ಪಡೆದುಕೊಂಡಿದೆಯಲ್ಲದೆ, ಬಿಡುಗಡೆಯ ಒಂದು ವಿಶಿಷ್ಟ ಸಾಧ್ಯತೆಯನ್ನು ತೋರಿಸುತ್ತದೆ: 'ದ್ವಿ ಸಾಂಸ್ಕೃತಿಕ ಅಥವಾ ಬಹು ಸಾಂಸ್ಕೃತಿಕ ಅಸ್ತಿತ್ವದಲ್ಲಿ ಬದುಕುವ ನಮ್ಮ ಭಾರತೀಯ ಕೌಶಲದ ಕೊನೆಯ ಪರೀಕ್ಷೆಯು ಬಹುಶಃ ನಮ್ಮ ಮಕ್ಕಳೊಡನೆ ಅನ್ಯೋನ್ಯವಾಗಿ ಬದುಕುವ ನಮ್ಮ ಸಾಮರ್ಥ್ಯವಾಗಿರಬಹುದು' (ನಂದಿ, 1987:75).

ನವೆಂಬರ್ 2008ರಲ್ಲಿ ನಂದಿಯವರು ಬಹಳ ವರ್ಷಗಳ ಕಾಲ ನಿರ್ದೇಶಕರಾಗಿದ್ದ ನವದೆಹಲಿಯಲ್ಲಿರುವ ಅಭಿವೃದ್ಧಿಹೊಂದುತ್ತಿರುವ ಸಮಾಜಗಳ ಅಧ್ಯಯನ ಕೇಂದ್ರವು [Centre for the Study of Developing Societies (CSDS)], ಭಾರತದಲ್ಲಿ ಮಕ್ಕಳ ಬಾಲ್ಯಾವಸ್ಥೆಯ ಅಧ್ಯಯನಗಳನ್ನು ಪರಿಶೀಲಿಸುವ ಮೊತ್ತಮೊದಲ ವಿಚಾರ ಸಂಕಿರಣವನ್ನು

ಏರ್ಪಡಿಸಿರುವುದು ಬಹುಶಃ ಆಕಸ್ಮಿಕವೇನಲ್ಲ. 1963ರಲ್ಲಿ ಆರಂಭವಾದಾಗಿನಿಂದ ಅದರ ಅಂತರ್ಜಾಲ ತಾಣದಲ್ಲಿ ಇರುವ ಪ್ರಕಾರ:

... ಈ ಸಂಸ್ಥೆಯು ಆಧುನಿಕತೆ, ಅಭಿವೃದ್ಧಿ ಮತ್ತು ಪ್ರಗತಿಯ ಸ್ವೀಕೃತ ಮಾದರಿಗಳ ಯಾವುದೇ ಕಲ್ಪನೆಯ ಬಗ್ಗೆ ತನ್ನ ಸಿನಿಕತನಕ್ಕೆ ಹೆಸರಾಗಿದೆ ಮತ್ತು ಈ ಪರಿಕಲ್ಪನೆಗಳು ಅಂತಾರಾಷ್ಟ್ರೀಯ ಬೌದ್ಧಿಕ ಚರ್ಚೆಗಳಲ್ಲಿ ಫ್ಯಾಶನ್ ಆಗುವ ಸಾಕಷ್ಟು ಮೊದಲೇ ಬಹುವಿಧದ ಮತ್ತು ಪರ್ಯಾಯ ಆಧುನಿಕತೆಗಳನ್ನು ಸೃಷ್ಟಿಸುವಲ್ಲಿ ಸ್ಥಳೀಯ ಸಂಪ್ರದಾಯಗಳ ಸೃಜನಾತ್ಮಕ ಬಳಕೆಯ ಮಾರ್ಗಗಳನ್ನು ಹುಡುಕಬಯಸುತ್ತದೆ. ಸಿಎಸ್‌ಡಿಎಸ್ (CSDS) ಸಂಸ್ಥೆಯು ಯಾವತ್ತೂ ಸಂಸ್ಕೃತಿಗಳ ನಡುವೆ ಮತ್ತು ಸಂಸ್ಕೃತಿಗಳಿಗೆ ಅಂತರ್ಗತವಾಗಿ (within) ಸಂಭಾಷಣೆಗಳಿಗೆ ಉತ್ತೇಜನ ನೀಡಿದೆ. ಸಾಂಸ್ಕೃತಿಕ ಸಂಪನ್ಮೂಲಗಳನ್ನು ರಾಜಕೀಯ ವ್ಯಕ್ತಿತ್ವಗಳ ಹಿಂಸಾತ್ಮಕ ಅಭಿವ್ಯಕ್ತಿಗಳಿಂದ ಪ್ರತ್ಯೇಕಿಸಲು ಪ್ರಯತ್ನಿಸಿದೆ ಮತ್ತು ಸಂಸ್ಕೃತಿಗಳ ಮತ್ತು ಸಮಾಜಗಳ ನಡುವೆ ಸೃಜನಾತ್ಮಕ ಸಂಭಾಷಣೆಗೆ ಭಿನ್ನಾಭಿಪ್ರಾಯಗಳು ಮಹತ್ವಪೂರ್ಣವೆನಿಸುತ್ತವೆ ಎಂಬ ಅಭಿಪ್ರಾಯವನ್ನು ಉತ್ತೇಜಿಸಿದೆ.

ವಿಚಾರಸಂಕಿರಣದ ಆಯೋಜಕರು ಮತ್ತು ಚೈಲ್ಡ್‌ಹುಡ್ ಸಂಪಾದಕೀಯ ಮಂಡಳಿಯ ಒಬ್ಬ ಸದಸ್ಯರಾದ ಶಾರದಾ ಬಾಲಗೋಪಾಲನ್ ಎದುರಿಗಿದ್ದ ಸವಾಲೆಂದರೆ, ಭಾರತದಲ್ಲಿನ ಬಾಲ್ಯಾವಸ್ಥೆಯನ್ನು ಅದು ಹಿಂದುಳಿದಿದೆ ಮತ್ತು ಪಶ್ಚಿಮದ ಸರಿಸಮ ನಿಲ್ಲಬೇಕು ಎಂಬ ನಿಟ್ಟಿನಲ್ಲಿ ಭಾವಿಸದಂತೆ ಅದನ್ನು ಗ್ರಹಿಸುವ ಪ್ರಯತ್ನ. ಕಕ್ಕರ್ ಮತ್ತು ನಂದಿಯವರು ಬಲವಾಗಿ ವಾದಿಸಿದಂತೆ ವಸಾಹತೋತ್ತರವಾದವು ಬಾಲ್ಯಾವಸ್ಥೆಯ ಪಾಶ್ಚಿಮಾತ್ಯ ಅನುಭವಗಳು ಭಾರತೀಯ ಅನುಭವಗಳಿಗಿಂತ ಉನ್ನತವಾದವುಗಳು ಎಂದು ನಂಬುವುದಿಲ್ಲ. ತಮ್ಮೊಳಗಿನ ಅನುಭವಗಳಿಗೆ ಪರಸ್ಪರ ಗೌರವ ಕೊಡುವ ಮೂಲಕ ಸಂಸ್ಕೃತಿಗಳು ಹಾಗೂ ಸಮಾಜಗಳ ನಡುವೆ ಸಂವಾದವನ್ನು ನೆಲೆಗೊಳಿಸಲು ಅದು ಪ್ರಯತ್ನಿಸುತ್ತದೆ. ಯಾವುದೇ ಗೊಂದಲವಿಲ್ಲದೆ ಬಡಮಕ್ಕಳ ಬಾಲ್ಯಾವಸ್ಥೆಯನ್ನು 'ರಕ್ಷಿಸುವ' ದಾನಿಗಳ ನಿಟ್ಟಿನ ಕಾಳಜಿಗಳನ್ನು ಹೊಂದಿರುವುದು ಅಥವಾ ಐತಿಹಾಸಿಕ, ಕಾಲಮಾನದ, ಮತ್ತು ಪ್ರಾತಿನಿಧಿಕ ಸಂಬಂಧಗಳಿಂದ ತಪ್ಪಿಸುವ ಅಪಾಯವನ್ನೊಳಗೊಂಡ ರೀತಿಯಲ್ಲಿ ಸಂಸ್ಕೃತಿಯನ್ನು ವೈಭವೀಕರಿಸುವ, ಮೂರ್ತೀಕರಿಸುವ, ಮತ್ತು ಆದರ್ಶೀಕರಿಸುವ ರಕ್ಷಣಾತ್ಮಕ ನಿಲುವನ್ನು ಧಾರಣಮಾಡುವುದು ಇವೆರಡರಲ್ಲಿ ಒಂದನ್ನು ಆಯ್ದುಕೊಳ್ಳುವ ಒತ್ತಡಕ್ಕೆ ಸಂಶೋಧಕರು ಸಿಲುಕದಂತೆ ಚರ್ಚೆಗಳು ಅಂತಹ ದ್ವಿಮಾನಗಳನ್ನು ಮೀರುವ ಸ್ವರೂಪದ್ದಾಗಿರಬೇಕು ಎನ್ನುವುದು ಈ ವಿಚಾರ ಸಂಕಿರಣದ ಉದ್ದೇಶವಾಗಿತ್ತು.

ಭಾಗವಹಿಸಿದವರೆಲ್ಲ ಕಡಿಮೆ ಸಂಖ್ಯೆಯಲ್ಲಿ ಪೂರ್ವಭಾವಿಯಾಗಿ ಆಯ್ಕೆಮಾಡಿದ 19 ಭಾರತೀಯ ಮತ್ತು 7 ಪಾಶ್ಚಿಮಾತ್ಯ ಸಂಶೋಧಕರು. ಇವರಲ್ಲಿನ ಪಾಶ್ಚಿಮಾತ್ಯರೆಂದರೆ, ಇಬ್ಬರು ಚೈಲ್ಡ್‌ಹುಡ್ ಪತ್ರಿಕೆಯ ಸಂಪಾದಕರು (Virginia Morrow ಮತ್ತು ನಾನು) ಮತ್ತು ಸಂಪಾದಕೀಯ ಮಂಡಳಿಯ ಸದಸ್ಯರೊಬ್ಬರಾದ Erica Burman. ಭಾರತೀಯ ಸಂಶೋಧಕರು ದೇಶದ ವಿವಿಧ ಭಾಗಗಳಿಂದ ಬಂದವರು ಮತ್ತು ನಾವು ಉದಯೋನ್ಮುಖ ಕ್ಷೇತ್ರವೆಂದು ಹೇಳುವ ಭಾರತದ ವಸಾಹತೋತ್ತರ ಬಾಲ್ಯಾವಸ್ಥೆಯ ಅಧ್ಯಯನಗಳಡಿಯಲ್ಲಿನ ಸೂಕ್ತವಾಗಿ ಆಯ್ಕೆಮಾಡಲ್ಪಟ್ಟ ವಿಷಯ ಮತ್ತು ದೃಷ್ಟಿಕೋನಗಳನ್ನು ಪ್ರತಿನಿಧಿಸುವವರಾಗಿದ್ದರು. ವಿಚಾರಸಂಕಿರಣದಲ್ಲಿ ಚರ್ಚಿಸಿದ ಕೆಲವು ಆಸಕ್ತಿಯುತ ವಿಷಯಗಳನ್ನು ಪುನರ್ಪರಿಶೀಲಿಸುವುದು ನನ್ನ ಉದ್ದೇಶವಲ್ಲ, ಬದಲಾಗಿ ಇಲ್ಲಿ, ನನ್ನ ಮನಸ್ಸಿನಲ್ಲಿ ಕೊರೆಯುತ್ತಿರುವ ಪ್ರಶ್ನೆಗೆ ಉತ್ತರವನ್ನು ಕಂಡುಕೊಳ್ಳುವ ಉದ್ದೇಶದಿಂದ ಈ ಉದಯೋನ್ಮುಖ ಕ್ಷೇತ್ರದಲ್ಲಿ ಮೂಡುತ್ತಿರುವ ಅಭಿಪ್ರಾಯಗಳನ್ನು ಸಂಗ್ರಹಿಸುವುದಾಗಿತ್ತು. ಮೂರು ಮುಖ್ಯ ಎಳೆಗಳನ್ನು ಇಲ್ಲಿ ಗುರುತಿಸಬಹುದಾಗಿದೆ: ಆಧುನಿಕ ಬಾಲ್ಯಾವಸ್ಥೆಯ ಒಂದು ನಿರ್ದಿಷ್ಟ ಭಾರತೀಯ ಮಾದರಿಯು ವಸಾತುಶಾಹಿಯ ಆಳ್ವಿಕೆಗೆ ಮುಖಾಮುಖಿಯಾದ ಸಂದರ್ಭದಲ್ಲಿ ಗಣ್ಯವರ್ಗದಲ್ಲಿ ಅದು ಹೇಗೆ ಉದಯವಾಯಿತು ಎನ್ನುವುದರ ಐತಿಹಾಸಿಕ ಅಧ್ಯಯನಗಳು; ಕಾಲ್ಪನಿಕ ಕತೆಗಳು ಹೇಗೆ ಬಾರತೀಯ ಬಾಲ್ಯಾವಸ್ಥೆಯನ್ನು ರಚಿಸುತ್ತವೆ ಮತ್ತು ಪ್ರತಿನಿಧಿಸುತ್ತವೆ ಎಂಬುದರ ಸಾಹಿತ್ಯಕ ಅಧ್ಯಯನಗಳು; ಮತ್ತು ಸಾಮಾಜಿಕ ನ್ಯಾಯದ ಹೋರಾಟದಲ್ಲಿ ಮಕ್ಕಳ ಸಕ್ರಿಯ ಭಾಗವಹಿಸುವಿಕೆಯನ್ನು ಅನಾವರಣಗೊಳಿಸಲು ಬಯಸುವ ವಿಮರ್ಶಾತ್ಮಕ ಸಮಾಜ ವಿಜ್ಞಾನ. ಈ ಕೆಳಗಿನ ಉದಾಹರಣೆಗಳ ಮೂಲಕ ನಾನು ಸ್ಪಷ್ಟಪಡಿಸುವಂತೆ, ಈ ಮೂರೂ ಎಳೆಗಳು ಸ್ಪಷ್ಟವಾಗಿ ಒಂದಕ್ಕೊಂದು ಸೇರಿಕೊಂಡಿವೆ ಮತ್ತು ಪಾಶ್ಚಿಮಾತ್ಯರ ಕಲ್ಪನೆಯಲ್ಲಿ

ನಂಬಿರುವಂತೆ ಅವನು ಅಥವಾ ಅವಳು ಬಲಿಪಶುವಾಗಿರುವ ಮಗು ಎನ್ನುವುದಕ್ಕಿಂತ ಭಿನ್ನವಾದ ತುಂಬು ಜೀವಂತಿಕೆಯ ಭಾರತೀಯ ಮಗುವಿನ ಸಾಮಾಜಿಕ ಚಿತ್ರಣವನ್ನು ಪ್ರತಿಫಲಿಸುತ್ತವೆ.

ಗೌತಮ್ ಚಂದೊ ರಾಯ್ (ವಿದ್ಯಾಸಾಗರ್ ವಿಶ್ವವಿದ್ಯಾನಿಲಯ, ಪಶ್ಚಿಮ ಬಂಗಾಳ ) ಅವರು 1880ರಿಂದ 1920ರ ನಡುವೆ ಪಶ್ಚಿಮ ಬಂಗಾಳದಲ್ಲಿ ಪ್ರಕಟವಾದ ಹಲವು ಮಕ್ಕಳ ಪತ್ರಿಕೆಗಳಿಂದ ಭಾರತೀಯ ಬಾಲ್ಯಾವಸ್ಥೆಯನ್ನು ಕುರಿತ ಚರಿತ್ರೆಯ ಮಾಹಿತಿಯ ಸಂಭಾವ್ಯ ಸಂಗ್ರಹವನ್ನು ಮಂಡಿಸಿದರು. ಇದರ ಪರಿಣಾಮವಾಗಿ ದೊರಯುವ ಚಿತ್ರಣವು, ಸ್ವಾರಸ್ಯವಿಲ್ಲದ, ಬೇಸರ ತರಿಸುವ ಮತ್ತು ಅವಮಾನಕರವಾದ ಆಂಗ್ಲ-ನಿಯಂತ್ರಿತ ಶಾಲಾ ಪಠ್ಯಗಳಿಗಿಂತ ಆಕರ್ಷಕ ಪರ್ಯಾಯ ಪಠ್ಯಗಳನ್ನು ಒದಗಿಸಿದ ಹೊಸ ಪೀಳಿಗೆಯ, ಗಂಡು ಮತ್ತು ಹೆಣ್ಣುಮಕ್ಕಳಿಬ್ಬರೆಡೆಗಿನ ವಯಸ್ಕರ ಆಸೆ ಆಕಾಂಕ್ಷೆಗಳನ್ನು ಪ್ರತಿಧ್ವನಿಸುತ್ತದೆ. ವಸಾಹತುಶಾಹಿ ಒಡೆಯರಿಗೆ ಅಲ್ಪಮಟ್ಟಿನ ನಿಯಂತ್ರಣವಿದ್ದ ಕಲ್ಪನಾ ಜಗತ್ತಿನಲ್ಲಿ ಸ್ವತಂತ್ರವಾಗಿ ವಿಹರಿಸಲು ಮಕ್ಕಳಿಗೆ ಮುಕ್ತವಾದ ಅವಕಾಶವನ್ನು ನೀಡುವುದು ಮತ್ತು ಬ್ರಿಟಿಷರ ನಿಯಂತ್ರಣ ವಲಯದಾಚೆ ಅವರ ಕಲ್ಪನೆಯು ಗರಿಗೆದರುವಂತೆ ಮಾಡುವುದು ಅದರ ಉದ್ದೇಶವಾಗಿತ್ತು. ಸಂಕ್ಷಿಪ್ತವಾಗಿ ಹೇಳುವುದಾದರೆ ಸ್ವಾತಂತ್ರ್ಯ ಹೋರಾಟಗಾರರು ಮತ್ತು ಭಾವೀ ನಾಗರಿಕರು ಒಂದಲ್ಲ ಒಂದು ದಿನ ಹೊರಹೊಮ್ಮುವಂತಹ ಕಾಲ್ಪನಿಕ ಭವಿಷ್ಯದ ದೇಶವಾಗಿ ಬಾಲ್ಯಾವಸ್ಥೆಯು ಅರ್ಥೈಸಲ್ಪಟ್ಟಿತು. ಇದೇರೀತಿಯ ತನ್ಮಯತೆಯನ್ನು ಹೈದರಾಬಾದಿನ ಮಹಿಳಾ ಅಧ್ಯಯನಗಳ ಅನ್ವೇಶಿ ಸಂಶೋಧನಾ ಕೇಂದ್ರದ ದೀಪಾ ಶ್ರೀನಿವಾಸ್ ಅವರು ಓದಿದ ಲೇಖನದಲ್ಲಿ ಕಾಣಬಹುದು. ಅವರು ಮಕ್ಕಳ ಕಥೆಗಳ ದಲಿತ[3] ಬರಹಗಾರರ ಬಗ್ಗೆ ಗಮನವನ್ನು ಕೇಂದ್ರೀಕರಿಸಿದರಲ್ಲದೆ, ಸಮುದಾಯದ ಸಂಬಂಧಗಳು ಮತ್ತು ಸಹಭಾಜಿತ (shared) ಗತಕಾಲದ ಹಿನ್ನೆಲೆಯಲ್ಲಿ ಅಂಚಿಗೆ ಸರಿಸಲ್ಪಟ್ಟ ತಮ್ಮ ಲೌಕಿಕ ಪರಿಸ್ಥಿತಿಯೊಂದಿಗೆ ಮಕ್ಕಳು ಹೇಗೆ ವ್ಯವಹರಿಸುತ್ತಾರೆ ಹಾಗೂ ಅದನ್ನು ಹೇಗೆ ಎದುರಿಸುತ್ತಾರೆ ಎನ್ನುವುದರ ಕುರಿತು ಗಮನವನ್ನು ಕೇಂದ್ರೀಕರಿಸುವ ಬರಹಗಾರರು ಹೇಗೆ ಸಾಮಾನ್ಯವಾಗಿ ಕಂಡುಬರುವ ಬಾಲ್ಯಾವಸ್ಥೆಯ ಮಾನದಂಡವನ್ನು ನಿರ್ಲಕ್ಷಿಸುತ್ತಾರೆ ಎಂಬುದರತ್ತ ಲಕ್ಷ್ಯವಹಿಸಿದರು. ಉದಾಹರಣೆಗೆ, ಅಂತಹ ಒಂದು ಕಥೆಯ ಹುಡುಗ ಬಡೆಯ್ಯಾ ಎಂಬ ದಲಿತ ನಾಯಕನ ಜೀವನವು ಆಹಾರ, ಕೆಲಸ, ಆಟಗಳು, ಕುಟುಂಬದಲ್ಲಿನ ಸಂಬಂಧಗಳ ಸುತ್ತಲೂ (ಸಮೃದ್ಧ ವಿವರಗಳೊಂದಿಗೆ) ಹೆಣೆಯಲ್ಪಟ್ಟಿದ್ದು, ಇವೆಲ್ಲವುಗಳನ್ನು ಸಂಪೂರ್ಣ ಭಿನ್ನವಾಗಿ ತೋರಿಸದೆ, ಸಮುದಾಯದ ದಿನನಿತ್ಯದ ಜೀವನದಲ್ಲಿ ನೆಲೆಸಿರುವಂತೆ ತೋರಿಸಲಾಗಿದೆ. ಈ ಪ್ರಕ್ರಿಯೆಯಲ್ಲಿ, ಬಾಲ್ಯಾವಧಿಯು ಸಂಕೀರ್ಣತೆ ಮತ್ತು ಗಟ್ಟಿತನವನ್ನು ಪಡೆಯುತ್ತದೆ. ಇದನ್ನು ಲೇಖಕರು ಧನಾತ್ಮಕ ಅಸ್ಮಿತೆಯ ಒಂದು ಮೂಲ (source) ಮತ್ತು ಆಶಾಕಿರಣವೆಂದು ಭಾವಿಸುತ್ತಾರೆ. ವಿಮರ್ಶಾತ್ಮಕ ಸಮಾಜ ವಿಜ್ಞಾನದ ಸಂಶೋಧನೆಗೆ ಸಂಬಂಧಿಸಿದ ಮೂರನೆಯ ಲೇಖನವು ಭಾರತೀಯ ಮಕ್ಕಳ ಕುರಿತಾಗಿ ಜಾಗತಿಕ ಗಮನ ಸೆಳೆದ ಮಕ್ಕಳ ವೇಶ್ಯಾವೃತ್ತಿಯ ಪ್ರಶ್ನೆಯನ್ನು ನೇರವಾಗಿ ಎದುರಿಸುತ್ತದೆ. ಲೇಖಕರಾದ ದೆಬೋಲಿನಾ ದತ್ತ ಮತ್ತು ಔಶಿಕ್ ಸರ್ಕಾರ್ ಅವರುಗಳು ಪಶ್ಚಿಮ ಬಂಗಾಳದ ಕೋಲ್ಕತ್ತಾದ ಸ್ವತಂತ್ರ ಸಂಶೋಧಕರು. ಲೈಂಗಿಕ ಕಾರ್ಯಕರ್ತರ ಮಕ್ಕಳು ಅಪಾಯದಲ್ಲಿದ್ದಾರೆ ಮತ್ತು ಅವರಿಗೆ ರಕ್ಷಣೆಯ ಅಗತ್ಯವಿದೆ[4] ಎಂಬಂತೆ ಪ್ರಚಾರಮಾಡಿದ ದೃಷ್ಟಿಕೋನವನ್ನು ವಿರೋಧಿಸುತ್ತಾ, ಮಕ್ಕಳು ಲೈಂಗಿಕ ಕಾರ್ಯಕರ್ತರ ರಾಜಕೀಯ ಸಮಾಜದ ಬಲೆಯಲ್ಲಿ ಸಿಲುಕಿದ್ದು, ತಮ್ಮ ತಾಯಂದಿರಿಗೆ ಘನತೆಯನ್ನು ತರಲು ಮತ್ತು ಲೈಂಗಿಕ ಕಾರ್ಯಕರ್ತರ ಮಕ್ಕಳ ಹಕ್ಕುಗಳನ್ನು ಪಡೆದುಕೊಳ್ಳಲು ಹೋರಾಡುತ್ತಿದ್ದಾರೆ ಎಂಬುದಾಗಿ ಲೇಖಕರು ಅವರನ್ನು ಪ್ರಸ್ತುತಪಡಿಸುತ್ತಾರೆ. ಸುಮಾರು ಒಂದು ಸಾವಿರ ಸದಸ್ಯರಿರುವ 'ಆಮ್ರ ಪದಾತಿಕ್' ('ನಾವು ಕಾಲ್ನಡಿಗೆಯ ಸೈನಿಕರು') ಎಂಬ ಮಕ್ಕಳ ಸಂಸ್ಥೆಯ ಜನಾಂಗ ವಿವರಣೆಯನ್ನು ಪ್ರಸ್ತುತಪಡಿಸುತ್ತಾ, ಮಕ್ಕಳು ರಾಜಕೀಯವಾಗಿ ಚುರುಕಾಗಿರುವವರು ಮತ್ತು ಅವರಿಗೆ ಸಂಬಂಧಪಟ್ಟ ಮತ್ತು ಬಾಧಿಸುವ ನೀತಿಗಳಲ್ಲಿ ಭಾಗೀದಾರರಾಗಿರುತ್ತಾರೆ ಎನ್ನುವುದನ್ನು ಮುನ್ನೆಲೆಗೆ ತರುತ್ತಾರೆ. ಲೇಖಕರ ದೃಷ್ಟಿಯಲ್ಲಿ, ಮಕ್ಕಳು ತಮ್ಮ ಬದುಕಿನ ವಾಸ್ತವಗಳನ್ನು ಅರ್ಥಮಾಡಿಕೊಳ್ಳುವುದರಲ್ಲಿನ ಸ್ಪಷ್ಟತೆ ಮತ್ತು ಅಂಚಿಗೆ ಸರಿಸಲ್ಪಟ್ಟ ಇತರ ಗುಂಪುಗಳೊಡನೆ ಐಕಮತ್ಯವನ್ನು ರೂಪಿಸುವ ಅವರ ಸಾಮರ್ಥ್ಯವು ಎದ್ದು ಕಾಣುವಂತಹದ್ದಾಗಿದೆ.

ಈ ಮೂರೂ ಲೇಖಕರು ತಮ್ಮದೇ ಆದ ರೀತಿಯಲ್ಲಿ, ‘ಒಳಗಿನ ಶತ್ರು’ವನ್ನು ಜೀವಂತವಾಗಿಡುವ ಭಯಾನಕ ಭಾರತೀಯ ಬಾಲ್ಯಾವಸ್ಥೆಯ ಚಿತ್ರಣವನ್ನು ತಪ್ಪಿಸಿ ಮುಂದೆ ಹೋಗಲು ಪ್ರಯತ್ನಿಸುತ್ತಿದ್ದಾರೆ ಮತ್ತು ಪುನರ್ನಿರ್ಮಿಸಿದ ಭೂತಕಾಲದ ನಿರಂತರತೆ ಮತ್ತು ಉತ್ತಮ ಭವಿಷ್ಯದ ಭರವಸೆಯೊಂದಿಗೆ ಬಾಲ್ಯಾವಸ್ಥೆಯನ್ನು ಪುನರ್ರಚಿಸುತ್ತಿದ್ದಾರೆ. ರೂಪಿಸಲ್ಪಟ್ಟ ಬಾಲ್ಯಾವಸ್ಥೆಯ ಸ್ವರೂಪದ ಅರಿವು ಇಲ್ಲಿ ಫ್ಯಾಶನ್‌ನ ಬೌದ್ಧಿಕ ಆಯ್ಕೆಯಲ್ಲ, ಬದಲಿಗೆ, ಏಕಾಂಗಿತನವನ್ನು ಮತ್ತು ದಬ್ಬಾಳಿಕೆಯನ್ನು ತಂದಂತಹ (ಈಗಲೂ ತರುತ್ತಿವೆಯೆಂಬುದು ದುಃಖಕರ ವಿಷಯ) ಜ್ಞಾನದ ವಿಶ್ಲೇಷಣೆಗಳನ್ನು ವಿರೋಧಿಸುವ ಒಂದು ಅವಶ್ಯಕ ಹೆಜ್ಜೆ. ಸ್ವಾತಂತ್ರ್ಯ, ಕಲ್ಪನೆ ಮತ್ತು ಸೃಜನಶೀಲ ಸಾಮರ್ಥ್ಯದೊಂದಿಗೆ ಬಾಲ್ಯಾವಸ್ಥೆಯನ್ನು ತೊಡಗಿಸುವುದು ಹೊಸ ಸಮಾಜದೊಂದಿಗೆ ಅದನ್ನು ಪುನರ್ರಚಿಸುವ ಒಂದು ಮಾರ್ಗವಾಗಿದೆ.

ಭಾರತೀಯ ಅನುಭವಗಳಿಂದ ನಾವು ಕೆಲವು ವಿಷಯಗಳನ್ನು ಕಲಿತುಕೊಳ್ಳಬಹುದು. ಮೊದಲನೆಯದಾಗಿ, ಮಕ್ಕಳಿಗೆ ಮಾಡಿದ ಅತಿ ದೊಡ್ಡ ಅನ್ಯಾಯವೆಂದರೆ ಬಾಲ್ಯಾವಸ್ಥೆ ಎಂದರೆ ಏನು ಅಥವಾ ಅದು ಹೇಗಿರಬೇಕು ಎಂಬುದನ್ನು ನಿರ್ಧರಿಸುವ ಒಡೆತನವನ್ನು ಆರೋಪಿಸಿಕೊಳ್ಳುವುದು. ವಿರಚನೆ ಅಥವಾ ಪುನರ್ರಚನೆಯ ನಿಟ್ಟಿನ ಹಲವಾರು ಬಾಲ್ಯಾವಧಿಗಳಿದ್ದರೂ, ಮತ್ತು ಅವುಗಳ ಸಂಖ್ಯೆ ಎಷ್ಟು ಮತ್ತು ಯಾವುವು ಎಂದು ತಿಳಿದುಕೊಳ್ಳುವ ಯಾವುದೇ ಮಾರ್ಗಗಳಿಲ್ಲದಿದ್ದರೂ ಕೂಡ ‘ಭಾರತೀಯ ಬಾಲ್ಯಾವಸ್ಥೆ ಎಂಬುದು ಇದೆಯೇ?’ ಎಂಬ ಪ್ರಶ್ನೆಗೆ ಉತ್ತರ ಧನಾತ್ಮಕವಾಗಿಯೆ ಇರುತ್ತದೆ. ಎರಡನೆಯದಾಗಿ, ವಿಮರ್ಶೆಯ ಪಾತ್ರ ಸೀಮಿತವಾಗಿರುತ್ತದೆ. ಪಾಶ್ಚಿಮಾತ್ಯ ದೇಶಗಳಲ್ಲಿ ಬಾಲ್ಯಾವಸ್ಥೆಯ ಅಧ್ಯಯನಗಳು ಬಹಳ ಹಿಂದಿನಿಂದಲೂ ಬಾಲ್ಯಾವಸ್ಥೆಯ ‘ನಿರಾಕರಿಸಲಾಗದ ಸತ್ಯಗಳನ್ನು’ ಸಹಜ ವಸ್ತುಸ್ಥಿತಿಗಳೆಂಬಂತೆ ಪ್ರಸ್ತುತಪಡಿಸುತ್ತ, ಅವುಗಳ ‘ನಿರಾಕರಿಸಲಾಗದ ಸತ್ಯ’ದ ಮೇಲೆ ಏಕಸ್ವಾಮ್ಯವನ್ನು ಸಾಧಿಸಿದ್ದು, ಅದನ್ನು ಸ್ಥಿರಗೊಳಿಸುವ ಅಧ್ಯಯನಶಿಸ್ತಿನ ಭದ್ರಕೋಟೆಗಳ ಅಸಾಧಾರಣ ಶಕ್ತಿಯಿಂದ ಬಹಳ ಹಿಂದಿನಿಂದಲೂ ಅಲ್ಲಿನ ಬಾಲ್ಯಾವಸ್ಥೆಯ ಅಧ್ಯಯನಗಳನ್ನು ಅಡ್ಡಿಪಡಿಸಲಾಗಿದೆ. ತಮ್ಮಲ್ಲಿ ಮಾತ್ರ ಅವುಗಳಿಗೆ ಉತ್ತಮ ಪರಿಹಾರವಿದೆ ಎನಿಸುವಂತಹ ಚರ್ಚಾಂಶಗಳನ್ನು ರೂಪಿಸುವ ವಿಕಾಸಾತ್ಮಕ ಮನೋವಿಜ್ಞಾನ, ಕಾರ್ಮಿಕ ಅಧ್ಯಯನಗಳು, ವೈದ್ಯಕೀಯ ಮತ್ತು ಕಾರ್ಯತಂತ್ರದ ಅಧ್ಯಯನಗಳಂತಹ ವಿಭಿನ್ನ ಕೇತ್ರಗಳಲ್ಲಿ ಇದನ್ನು ಕಾಣಬಹುದು: ಬಾಲ ಸೈನಿಕರಿಗೆ ಶಾಂತಿಸ್ಥಾಪನೆ ಮತ್ತು ನಿಶ್ಯಸ್ತ್ರೀಕರಣ; ಅವರನ್ನು ಕುರಿತ ಕಾರ್ಮಿಕ ನೀತಿಗಳು ಮತ್ತು ತಪಾಸಣೆಗಳು, ಹೆಚ್‌ಐವಿ/ಏಡ್ಸ್‌ನಿಂದ ಬಾಧಿತರಾದ ಮಕ್ಕಳಿಗೆ ಔಷಧಿಗಳು ಮತ್ತು ಅವರನ್ನು ರೋಗದಿಂದ ತಡೆಗಟ್ಟುವಿಕೆ, ಲೈಂಗಿಕ ಕಾರ್ಯಕರ್ತರ ಮಕ್ಕಳಿಗೆ ನೆಲೆಯನ್ನು ಸ್ಥಾಪಿಸುವುದು, ಯುದ್ಧದಲ್ಲಿ ನೊಂದವರ ಆಘಾತಕ್ಕೆ ಚಿಕಿತ್ಸೆ ಇವೆಲ್ಲವೂ ಇದಕ್ಕೆನಿದರ್ಶನಗಳೆನಿಸಿವೆ. ಈ ಪ್ರಭಾವೀ ಲಾಬಿಗಳು ನಮ್ಮನ್ನು ಆಲಿಸಬೇಕೆಂಬ ಪ್ರಯತ್ನವು ಎಲ್ಲಿಯವರೆಗೂ ಪ್ರಮುಖ ಗುರಿಯಾಗಿರುತ್ತದೋ ಅಲ್ಲಿಯವರೆಗೂ ಪರಿಹಾರಗಳನ್ನು ಒಪ್ಪುವುದನ್ನು ನಿರಾಕರಿಸುವ ವಿವೇಚನಾತ್ಮಕ ನಿಲುವನ್ನು ಹೊರಗೆ ರೂಪಿಸಿಕೊಳ್ಳಬಹುದು ಮತ್ತು ಸಮಾಜಿಕ ನ್ಯಾಯಕ್ಕಾಗಿ ಹೋರಾಡುತ್ತಿರುವವರ ವಿರುದ್ಧ ಕೂಡ ಇದನ್ನು ರೂಪಿಸಿಕೊಳ್ಳಬಹುದು ಎನ್ನುವ ವಿಮರ್ಶಾತ್ಮಕ ನಿಲುವನ್ನು ಹೇಗೋ ಸಹಿಸಿಕೊಳ್ಳಬೇಕಾದ ಮತ್ತು ಅತ್ಯಂತ ಕ್ಷೀಣಧ್ವನಿಯ ಹೀನಾಯಸ್ಥಿತಿಗೆ ತಲುಪಿದ ನಿಲುವು ಎಂದು ಖಂಡಿಸಲಾಗುತ್ತದೆ. ಬಾಲ್ಯಾವಧಿಯ ಅಧ್ಯಯನಗಳ ಭಾರತೀಯ ಅನುಭವವು ಸೂಚಿಸುವುದೇನೆಂದರೆ, ರಾಬರ್ಟ್ ಯಂಗ್ ಹೇಳಿರುವಂತೆ ‘ಚಾಲ್ತಿಯಲ್ಲಿರುವುದಕ್ಕೆ ವಿರುದ್ಧವಾಗಿ ಅದರ ಮತ್ತೊಂದು ಮಗ್ಗುಲಿನ ಚಿತ್ರಣವನ್ನು ನೋಡಬೇಕು’ ಎನ್ನುವುದು ಕೇವಲ ಅತ್ಯಂತ ಉತ್ತೇಜಕ, ಆಹ್ಲಾದಕರ, ಮತ್ತು ಧನಾತ್ಮಕ ಭವಿಷ್ಯದ ಮಾರ್ಗವಷ್ಟೇ ಆಗಿರದೆ ಟೀಕೆಯಲ್ಲಿ ಮಾತ್ರ ಮುಳುಗಿ ಹೋಗದೆ ಬಾಲ್ಯಾವಸ್ಥೆಯ ಅಧ್ಯಯನಗಳಿಗೆ ಭವಿಷ್ಯದಲ್ಲಿ ಸಾಕಷ್ಟು ಗಟ್ಟಿ ನೆಲೆಯನ್ನು ಸಹ ಇದು ಒದಗಿಸುತ್ತದೆ. (ಯಂಗ್, 2004).

ಭಾರತೀಯ ಅನುಭವದ ಮೂರನೆಯ ಪಾಠವೇನೆಂದರೆ, ಬಾಲ್ಯಾವಸ್ಥೆಯ ಅಧ್ಯಯನಗಳ ಭವಿಷ್ಯವು ಚರ್ಚೆಗಳನ್ನು ಎಷ್ಟು ಮುಕ್ತವಾಗಿ ಮುಂದುವರೆಸಿಕೊಂಡು ಹೋಗಲಾಗುತ್ತದೆ ಎಂಬುದನ್ನು ನಿರ್ಣಾಯಕವಾಗಿ ಅವಲಂಬಿಸಿದೆ. ಕಳೆದ ಸುಮಾರು 20 ವರ್ಷಗಳಲ್ಲಿ ಬಾಲ್ಯಾವಸ್ಥೆಯ ಕುರಿತ ಪಾಶ್ಚಿಮಾತ್ಯ ಅಧ್ಯಯನಗಳು ವರ್ಗೀಕೃತ ಅಧ್ಯಯನಶಿಸ್ತುಗಳ ಕ್ಷೇತ್ರದಲ್ಲಿ ಯಾವ ಮನ್ನಣೆಯನ್ನು ಪಡೆದುಕೊಳ್ಳಲಾಗದಿದ್ದರೂ ಮಕ್ಕಳು ವಸ್ತುಗಳಲ್ಲ ಅಥವಾ ಬಲಿಪಶುಗಳಲ್ಲ, ಆದರೆ

ಚಟುವಟಿಕೆಯುಳ್ಳವರು ಎನ್ನುವುದನ್ನು ಲಘು ಸಂಗೀತದಂತೆ ಮತ್ತೆ ಮತ್ತೆ ಪುನರಾವರ್ತಿಸಿವೆ. ವಿಚಾರ ಸಂಕಿರಣದಲ್ಲಿ ನನ್ನನ್ನು ಹೆಚ್ಚು ಪ್ರಭಾವಿಸಿದ್ದೆಂದರೆ, ಭಾರತದಲ್ಲಿ ಬಾಲ್ಯಾವಸ್ಥೆಗಳಿವೆ ಎನ್ನುವುದಕ್ಕಿಂತ ಹೆಚ್ಚಾಗಿ ಭಾರತೀಯ ವಿದ್ವಾಂಸರುಗಳು ಬಾಲ್ಯಾವಸ್ಥೆಯನ್ನು ಭಾರತೀಯತೆಯ ಒಂದು ರಣರಂಗವಾಗಿ, ಒಂದು ಪ್ರಸ್ತಾವನೆಯಾಗಿ ನೋಡುತ್ತಾರೆ ಎನ್ನುವುದು. ಮತ್ತೊಂದು ಬಗೆಯಲ್ಲಿ ಹೇಳುವುದಾದರೆ, ಜನಾಂಗಗಳ ನಡುವಿನ ದೀರ್ಘಕಾಲದ ಬಾಂಧವ್ಯವಾಗಿ ಪುನರ್ರಚಿಸಲ್ಪಟ್ಟ ಬಾಲ್ಯಾವಸ್ಥೆಯು ಶೋಷಣೆ ಮತ್ತು ದಬ್ಬಾಳಿಕೆಯ ವಿರುದ್ಧ ಹೋರಾಟವನ್ನು ಮುಂದೊಯ್ಯುತ್ತಿರುವಂತೆ ತಳಮಟ್ಟದಿಂದ ಕ್ರಿಯಾಶೀಲವಾಗಿ ರಚಿಸಲ್ಪಡುತ್ತಿದೆ. ನನ್ನ ಪ್ರಕಾರ, ಇದು ಕೇವಲ ಕೊಡುಗೆದಾರರ ಪೂರ್ವಭಾವಿ ಆಯ್ಕೆಯ ಪರಿಣಾಮವಲ್ಲ, ಬದಲಿಗೆ, ಭಾರತೀಯರು ವಸಾಹತುಶಾಹಿ ಪರಂಪರೆಯಿಂದ ಭಾರತೀಯ ಬಾಲ್ಯಾವಸ್ಥೆಯನ್ನು ಮುಕ್ತಗೊಳಿಸಬೇಕೆಂಬ ವಿಸ್ತೃತ ನಂಬಿಕೆ.

ಎರಡು ಪರಿಣಾಮಗಳು ಮುಖ್ಯವೆಂದು ನನಗೆ ಹೊಳೆಯುತ್ತದೆ: ಮೊದಲನೆಯದು, ಸರ್ಕಾರೇತರ ಸಂಸ್ಥೆಗಳ - ಪ್ರೇರೇಪಿತ ಭಾರತೀಯ ಮಕ್ಕಳ ರಕ್ಷಣಾ ಕಾರ್ಯವು ಹೇಗೆ ಇಂತಹ ಕ್ರಿಯಾಶೀಲ, ಸ್ಯೆದ್‌ರವರ ನುಡಿಗಟ್ಟಿನಲ್ಲಿ ಹೇಳುವುದಾದರೆ, 'ವೈರುಧ್ಯಮಯ ಬಾಲ್ಯಾವಸ್ಥೆಯ' (ಸ್ಯೆದ್, 1994) ಸೃಜನೆಗಳನ್ನು ರಾಡಿಗೊಳಿಸುತ್ತಿವೆ ಎಂಬುದನ್ನು ವಿಮರ್ಶಾತ್ಮಕವಾಗಿ ಮಾಪನಮಾಡುವುದು., ಇನ್ನೊಂದು ನಮ್ಮ ಚರಿತ್ರೆಯಲ್ಲಿ ಮತ್ತು ಸಂಸ್ಕೃತಿಯಲ್ಲಿ ಇರಬಹುದಾದ ವೈರುಧ್ಯಗಳನ್ನು ಮುಕ್ತವಾಗಿ ನೋಡಿ, ನಮ್ಮ ಮಕ್ಕಳನ್ನು ನಾವು ಆಧುನಿಕ ಬಾಲ್ಯಾವಸ್ಥೆಯಿಂದ ಹೇಗೆ ರಕ್ಷಿಸಬಹುದು ಎಂಬುದನ್ನು ಭಾರತದಿಂದ ಕಲಿಯಬಹುದು.

## Notes

1. 'Brief van de Landelijke India Werkgroep aan staatssecretaris Heemskerk' 18 November 2008; at: www.indianet.nl
2. I am grateful to Sarada Balagopalan for her insightful remarks on an earlier version of this article.
3. Dalit is a term used by various groups in South Asia formerly designated as 'untouchables'.
4. See the award-winning documentary 'Born into Brothels' (2004), by Ross Kauffman and Zana Briski; at www.imdb.com/title/tt0388789. For an Indian critique of the colonial overtones of depicting the children as completely helpless and isolated and fully dependent on western rescue operations, go to: www.samarmagazine.org/archive/article.php?id=190

## References

Kakar, Sudhir (1978) *The Inner World: A Psychoanalytic Study of Childhood and Society in India.* New Delhi: Oxford University Press.

Nandy, Ashis (1987) *Traditions, Tyranny and Utopias: Essays in the Politics of Awareness*. New Delhi: Oxford University Press. (Reprinted in: *A Very Popular Exile*, 2007.)
Said, Edward (1994) *Culture and Imperialism*. London: Vintage.
Young, Robert (2004) *Postcolonialism: A Very Short Introduction*. Oxford: Oxford University Press.

Olga Nieuwenhuys